ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಹುಲಿಪ್ರಿಯರ ವಿಪರೀತ ಕಥೆಗಳು

ಹುಲಿಯ ಹಿಂಬಾಲಿಸುವ ಜನರ ಕೆಲವು ಅಚ್ಚರಿ ಹುಟ್ಟಿಸುವ ವಿಷಯಗಳನ್ನು ಇಲ್ಲಿ ಹೇಳಬೇಕು. ನೀವು ನಂಬಲ್ಲ, ಈ 'ದುಶ್ಚಟ'ಕ್ಕೆ ಬಿದ್ದು ಮದುವೆಯೇ ಆಗದ ಭೂಪರೂ ಕೆಲವರಿದ್ದಾರೆ. ತಿಂಗಳಲ್ಲಿ ಹತ್ತು– ಹದಿನೈದು ದಿನ ಬಂದಿದ್ದು ದುಡಿದ ದುಡಿಮೆಯೆಲ್ಲಾ ಸಫಾರಿಗೆ ಸುರಿದು ಜೇಬು ಖಾಲಿ ಮಾಡಿಕೊಂಡು ಮತ್ತೆ ಓಡುವ ಧೈರ್ಯವಂತರಿದ್ದಾರೆ. ಕೆಲವರಂತೂ ವ್ಯಾಘ್ರಗಳ ಕಾಣುವ ಹಪಾಹಪಿಯಲ್ಲಿ ಮನೆಮಠ ಬಿಟ್ಟು ನಿರುಮ್ಮಳವಾಗಿದ್ದಾರೆ.

ಮುಂದೆ ಹುಲಿ ಕಾಣುತ್ತಿತ್ತು. ಅದು ನಮ್ಮ ಕಡೆಗೇ ನೋಡುತ್ತಿತ್ತು. ಜೀಪು ಎಲ್ಲಿ ನಿಲ್ಲಿಸಬೇಕೆಂದು ಆ ಹುಡುಗ ಕ್ಷಣಕ್ಕೊಂದು ಡ್ರೈವರ್‌ಗೆ ಡೈರೆಕ್ಷನ್ ಕೊಟ್ಟು ಗೊಂದಲ ಎಬ್ಬಿಸುತ್ತಿದ್ದ. ಡ್ರೈವರ್ ತನ್ನ ಸ್ವಂತ ಬುದ್ಧಿ ಉಪಯೋಗಿಸಿದ್ದರೆ ಏನೂ ಆಗುತ್ತಿರಲಿಲ್ಲ. ಆ ಸಿರಿವಂತ ಹುಡುಗನ ಟಿಪ್ಸ್‌ನ ಆಸೆಗೆ ಮೊದಲೇ ಬಲಿ ಬಿದ್ದಿದ್ದ ಅವನೂ ಹುಡುಗನ ತಾಳಕ್ಕೆ ತಕ್ಕಂತೆ ಕುಣಿದ. ಹುಲಿಯ ತೀರಾ ಹತ್ತಿರಕ್ಕೆ ಹೋಗುವ ತಪ್ಪು ಮಾಡಿಯೇ ಬಿಟ್ಟ. ಒಮ್ಮೆ ಜೀಪು ನಿಲ್ಲಿಸಿ, ಮತ್ತೆ ಭರ್ರೆಂದು ಮುಂದೆ ಓಡಿಸಿ, ಆ ಕಡೆ, ಈ ಕಡೆ, ಯಾವ ಕಡೆ ಜೀಪು ತಡವಬೇಕು ಎಂದು ನಿರ್ಧರಿಸುವ ಹೊತ್ತಿಗೆ ಹತ್ತಿರಾದ ಹುಲಿ ದಿಗಿಲಾಗಿ ಹಳ್ಳದ ಕಡೆ ಇಳಿಯಿತು. ತಕ್ಷಣವೇ ಆ ಕಡೆಯಿಂದ ಈ ಕಡೆಯಿಂದ ದೂಳೆಬ್ಬಿಸಿಕೊಂಡ ಬಂದ ಜೀಪುಗಳು ನಮ್ಮನ್ನು ಹಿಂದಿಕ್ಕಿ ಮುಂದೆ ಹೋಗಿ ಗೂಟ ಜಡಿದವು. ಮೊದಲಿಗೇ ಹುಲಿ ಕಂಡ ನಮಗೆ ಸಿಕ್ಕಿದ್ದು ಮೂರು ನಾಮ. ಅವರಿಗೆಲ್ಲಾ ಹುಲಿಯ ಚೆಂದದ ಪಟಗಳು ಸುಲಭವಾಗಿ ದಕ್ಕಿದವು. ಒಳ್ಳೆಯ ಗೋಲ್ಡನ್ ಚಾನ್ಸ್ ಅನ್ಯಾಯವಾಗಿ ತಪ್ಪು ನಿರ್ಣಯದಿಂದ ಕೈತಪ್ಪಿ ಹೋಯಿತು. ನಮ್ಮ ಕ್ಯಾಮೆರಾ ಮೂತಿಗೆ ಕಂಡದ್ದು ಬರೀ ಜನರ ಬೆನ್ನುಗಳು, ವಾಹನಗಳ ಅಂಡುಗಳು ಮಾತ್ರ. ಆಗ ಎಲ್ಲಿತ್ತೋ ಸಿಟ್ಟು ಕಿತ್ತುಕೊಂಡು ಬಂದೇ ಬಿಟ್ಟಿತು.

'ಏಯ್ ಸೀಮೆಗಿಲ್ಲದೋನೆ? ಚೆನ್ನಾಗಿ ಸಿಗ್ತಿದ್ದ ಹುಲಿ ಫೋಟೊನೂ ಹಾಳ್ ಮಾಡ್ದಲ್ಲೋ ಏಯ್ ಕೆಪರಾ! ಡ್ರೈವರ್ ಕೆಲಸ ಅವ್ನು ಮಾಡ್ತಾನೆ. ನೀನು ಅದುಮ್ಕೊಂಡು ಕುಕ್ಕೊಂಡಿರೋದು ಕಲಿ. ಡಿಪಾರ್ಟ್‌ಮೆಂಟಿನ ಜನಕ್ಕೆ ಗೊತ್ತಿರುತ್ತೆ. ಎಲ್ಲಿ, ಹೆಂಗೆ? ಯಾವ ಪೊಸೀಶನ್ನಲ್ಲಿ ವೆಹಿಕಲ್ ನಿಲ್ಲಿಸಬೇಕೂಂತ. ನೀನು ಅಡ್ನಾಡಿ ಡೈರೆಕ್ಷನ್‌ಯೆಲ್ಲಾ ಇಲ್ಲಿ ಕೊಡಬ್ಯಾಡ. ಸೀದಾ ಹುಲಿ ಕುಂಡೆ ಹತ್ರ ತೆಗೊಂಡೋಗಿ ಜೀಪ್ ಹಾಕಿಸಿದ್ರೆ ಪ್ರೈಮ್ ಲೆನ್ಸ್ ಹಾಕ್ಕೊಂಡಿರೋ ನಾವು ಹೆಂಗಯ್ಯ ಫೋಟೊ ತೆಗೆಯೋದು. ಟೈಗರ್ ಹತ್ರಕ್ಕೆ ತಿವಿಯೋರ ತರ ಗುಂಯ್ ಅಂತ ನುಗ್ಗಿಸಿಕೊಂಡು ಹೋಗೋಕೆ ಹೇಳ್ತಿಯಲ್ಲ! ನಿನಗೆ ತಲೆ ಸರಿ ಇಲ್ವಾ? ಹಿಂಗೆ ಅಬ್ಬರಿಸಾಡಿದ್ರೆ ಹುಲಿಗೆ ಗಾಬರಿಯಾಗುತ್ತೆ ಅನ್ನೋ ಕಾಮನ್ ಸೆನ್ಸ್ ಕೂಡ ನಿನಗಿಲ್ಲವಲ್ಲ. ನಿನ್ನಿಂದ ಎಲ್ಲಾ ಹಾಳಾಗಿ ಹೋಯ್ತು. ಥೂ.. ಎಂಥ ದರಿದ್ರನಯ್ಯ ನೀನು' ಎಂದು ಕಾಡಿನ ಸಫಾರಿಯಲ್ಲಿದ್ದ ಡಾ. ರಾಘು ಆ ಹುಡುಗನ ಮೇಲೆ ಉರಿದುಬಿದ್ದರು.

ಇಲ್ಲಿ ರಾಘು ಬದಲಿಗೆ ಯಾರೊಬ್ಬರಿದ್ದರೂ ಹೀಗೆ ಸಿಟ್ಟಾಗಿ